**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.</u>**

# <u>ಕ್ರಿ ಮೊ ಸಂಖ್ಯೆ 1298/2021</u>

**<u>ಪಿರ್ಯಾದಿ</u>** ： ರಾಜ್ಯದ ಪರವಾಗಿ ಲಿಂಗದಹಳ್ಳಿ ಪೊಲೀಸರು

**- ವಿರುದ್ಧ -**

**<u>ಆರೋಪಿ/ತರು</u>：**

1) ಶಂಕರಪ್ಪ.ಜಿ.ಕೆ ಬಿನ್ ಲೇಟ್ ಕೆಂಚಪ್ಪ, 65 ವರ್ಷ, ವಾಸ ： ವಿನೋಬಾ ನಗರ, ಶಿವಮೊಗ್ಗ ನಗರ.
2) ರೂಪೇಶ್ ಕುಮಾರ್ ಬಿನ್ ಸಿದ್ದಪ್ಪ, 46 ವರ್ಷ,
3) ಅಭಿಶೇಕ್ ಬಿನ್ ರಮೇಶ್, 22 ವರ್ಷ,
4) ಸಂಜು ಬಿನ್ ಬಸಪ್ಪ, 28 ವರ್ಷ,
5) ಮಂಜು ಬಿನ್ ತಿಮ್ಮಯ್ಯ, 36 ವರ್ಷ,
6) ಸಂತೋಷ ಬಿನ್ ಭೀಮಾನಾಯ್ಕ, 28 ವರ್ಷ,
7) ಬಾಬು ಬಿನ್ ರಾಮಣ್ಣ, 35 ವರ್ಷ,

ಎಲ್ಲರೂ ವಾಸ ： ನಂದಿಹೊಸಳ್ಳಿ ಗ್ರಾಮ ಗ್ರಾಮ, ಲಿಂಗದಹಳ್ಳಿ ಹೋಬಳಿ, ತರೀಕೆರೆ ತಾಲ್ಲೂಕು

**<u>-：ದೋಷಾರೋಪಣೆ：-</u>**

ಶ್ರೀಮತಿ ಊರ್ಮಿಳ.ವಿ., ಬಿ.ಎ.ಎಲ್, ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ ಆದ ನಾನು ನಿಮ್ಮ ವಿರುದ್ದ ಮಾಡುವ ದೋಷಾರೋಪಣೆಗಳೇನೆಂದರೆ：-

ದಿನಾಂಕ 28.07.2020 ರಂದು ರಾತ್ರಿ 11.35 ಗಂಟೆ ಸಮಯದಲ್ಲಿ ಲಿಂಗದಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ಬೈರಾಪುರ ಗ್ರಾಮಕ್ಕೆ ಹೋಗುವ ರಸ್ತೆಯ ಪಕ್ಕದಲ್ಲಿರುವ ಚಾಸಾ-1 ಶ್ರೀಮತಿ ಮಾಲತಿರವರ ಸರ್ವೆ ನಂ.260, 260/1ರ ಜಮೀನಿಗೆ ಆರೋಪಿತರಾದ ನೀವು ಏಕೋದ್ದೇಶದಿಂದ ಮಾರುತಿ ಕಾರ್ ಸಂಖ್ಯೆ ಕೆಎ：14/ಎನ್.-7301 ಹಾಗೂ ಟಾಟಾ ಎಸಿ ವಾಹನ ಸಂಖ್ಯೆ ಕೆಎ：13/ಸಿ-8688 ರ ವಾಹನಗಳಲ್ಲಿ ಜಮೀನಿನ ವಿಚಾರದಲ್ಲಿ ಅಕ್ರಮ ಕೂಟ ಕಟ್ಟಿಕೊಂಡು ಬಂದಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 143ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಎರಡನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಮಾರುತಿ ಕಾರ್ ಸಂಖ್ಯೆ ಕೆಎ:14/ಎನ್.-7301 ಹಾಗೂ ಟಾಟಾ ಎಸಿ ಕೆಎ:13/ಸಿ-8688 ರ ವಾಹನಗಳಲ್ಲಿ ಜಮೀನಿನ ವಿಚಾರದಲ್ಲಿ ಅಕ್ರಮ ಕೂಟ ಕಟ್ಟಿಕೊಂಡು ಬಂದು ದೊಂಬಿ ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 147 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮೂರನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು ಚಾಸಾ-1 ರವರ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 448 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನಾಲ್ಕನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು ಚಾಸಾ-1 ರವರ ಜಮೀನಿನಲ್ಲಿದ್ದ ಜೋಳದ ಬೆಳೆಯನ್ನು ನಾಶಪಡಿಸಲು ಪ್ರಯತ್ನಿಸಿದ್ದು , ವಿಷಯ ತಿಳಿದು ಚಾಸಾ-1 ಹಾಗೂ ಚಾಸಾ-8 ರಿಂದ 11 ರವರು ಸ್ಥಳಕ್ಕೆ ಹೋದಾಗ 1 ನೇ ಆರೋಪಿಯಾದ ನೀವು ಚಾಸಾ-1 ರವರ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ಅವರನ್ನು ಹಿಡಿದು ಎಳೆದಾಡಿ ಅವರ ಮಾನಕ್ಕೆ ಕುಂದುಂಟು ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 354 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಐದನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು, ಚಾಸಾ-1 ಹಾಗೂ ಚಾಸಾ-8 ರಿಂದ 10 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 324 ರ ಸಹವಾಚಕ ಕಲಂ 504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಆರನೇಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು, ಚಾಸಾ-1 ರವರ ಜಮೀನಿಗೆ ಹಾಕಿದ್ದ ತಂತಿ ಬೇಲಿಯನ್ನು ಕಟ್ ಮಾಡಿ ಹಾಗೂ ಜಮೀನಿನಲ್ಲಿ ಬೆಳೆದಿದ್ದ ಜೋಳದ ಬೆಳೆಯನ್ನು ತುಳಿದು ಹಾಳು ಮಾಡಿ ಚಾಸಾ-1 ರವರಿಗೆ ಸುಮಾರು ರೂ.4 ಲಕ್ಷದ ಬೆಳೆ ಹಾನಿ ಮಾಡಿ ಚಾಸಾ-1 ರವರಿಗೆ ನಷ್ಟವುಂಟು ಮಾಡಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 427

ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಕೊನೆಯದಾಗಿ, ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಬಂದು, ಚಾಸಾ-1, 8 ರಿಂದ 11 ರವರಿಗೆ ಕೊಲೆ ಬೆದರಿಕೆ ಹಾಕಿದ್ದು, ಆದಕಾರಣ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 506 ರ ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ನೀವು ಸದರಿ ಆರೋಪದ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕುದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ : 03.05.2024

ಸಹಿ

**(ಊರ್ಮಿಳ.ವಿ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.**